# ಆಗ ಟೀಚರ್, ಈಗ ರಾಕ್‌ಸ್ಟಾರ್!

■ ಪ್ರವೀಣ ಕುಲಕರ್ಣಿ



ಜನರ ಒಳಿತಿಗೆ ಏನನ್ನೂ ಮಾಡದಿದ್ದರೂ ಸದಾ ಪ್ರಚಾರ ಬಯಸುವಂತಹ ಬಾಯಿಬಡುಕರೇ ಹೆಚ್ಚಾಗಿ ತುಂಬಿರುವ ಸಮಾಜ ನಮ್ಮದು. ಪ್ರಚಾರದಿಂದ ದೂರ ಇದ್ದು, ಜನಸಾಮಾನ್ಯರ ಒಳಿತಿಗಾಗಿ ಬದ್ಧತೆಯಿಂದ ಸದ್ದಿಲ್ಲದೆ ಕೆಲಸ ಮಾಡುವವರು ಎಲ್ಲೋ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರೆ. ಅಂಥ ಸಾಧಕರಲ್ಲಿ ಕೇರಳದ ಶೈಲಜಾ ಟೀಚರ್ (ಕೆ.ಕೆ. ಶೈಲಜಾ) ಕೂಡ ಒಬ್ಬರಾಗಿದ್ದಾರೆ.

ಕೇರಳದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮತದಾರರು ದಾಖಲೆಯ 61,035 ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಶೈಲಜಾ ಟೀಚರ್ ಅವರ ಪರಿಶ್ರಮಕ್ಕೆ ತಕ್ಕ ಬಳವಳಿಯನ್ನೇ ಕೊಟ್ಟಿದ್ದಾರೆ. ಕೇರಳದ ಆರೋಗ್ಯ ಸಚಿವರಾಗಿ ಈ ಟೀಚರ್, ಸಾರ್ವಜನಿಕ ಆರೋಗ್ಯದ ಬಿಕ್ಕಟ್ಟುಗಳನ್ನು ಎದುರಿಸಿದ ರೀತಿ ಇಡೀ ಜಗತ್ತಿನ ಪ್ರಶಂಸೆಗೆ ಪಾತ್ರವಾಗಿದೆ. ನಿಫಾ ಹಾಗೂ ಕೊರೊನಾ ಸೋಂಕು ಕಾಡಲಾರಂಭಿಸಿದ ಸಂದರ್ಭದಲ್ಲಿ ಅವರು ಅಕ್ಷರಶಃ ಸೇನಾನಿಯಂತೆ ನಿಂತು ಕೆಲಸ ಮಾಡಿದವರು. ಆರೋಗ್ಯ ಪಡೆಯನ್ನು ಒಂದು ತಂಡವಾಗಿ ಕಟ್ಟಿಕೊಂಡು ಸೋಂಕಿನ ಅಟಾಟೋಪಕ್ಕೆ ಅಂಕುಶವನ್ನೂ ಹಾಕಿದವರು.

ಶೈಲಜಾ ಅವರು ಮೆರೆದ ಕರ್ತವ್ಯಪ್ರಜ್ಞೆಯಿಂದಾಗಿ ಅವರಿಗೆ ನ್ಯೂಜಿಲೆಂಡಿನ ಪ್ರಧಾನಿ ಜಸಿಂಡಾ ಆರ್ಡರ್ನ್, ಜರ್ಮನಿಯ ಅಧ್ಯಕ್ಷೆ ಏಂಜೆಲಾ ಮರ್ಕೆಲ್ ಅವರ ಜತೆ ವಿಶ್ವನಾಯಕಿಯರ ಪಟ್ಟಿಯಲ್ಲೂ ಸ್ಥಾನ ಲಭಿಸುವಂತಾಯಿತು. ಇಂಗ್ಲೆಂಡಿನ 'ಪ್ರಾಸ್ಪೆಕ್ಟ್ ಮ್ಯಾಗಝಿನ್' ನಡೆಸಿದ ಸಮೀಕ್ಷೆಯಲ್ಲಿ ಈ ಟೀಚರ್ 'ಟಾಪ್ ಥಿಂಕರ್ ಆಫ್ ದ ಇಯರ್ 2020' ಆಗಿ ಆಯ್ಕೆಯಾದರು.

ಶೈಲಜಾ ಅವರದು ಹೇಳಿಕೇಳಿ ಕಮ್ಯುನಿಸ್ಟ್ ಹಿನ್ನೆಲೆಯ ಕುಟುಂಬ. ಅಜ್ಜಿ ಎಂ.ಕೆ.ಕಲ್ಯಾಣಿ ಅವರಿಂದ ಪ್ರಭಾವಿತರಾದ ಅವರು, ಕಾಲೇಜು ದಿನಗಳಲ್ಲಿಯೇ ಎಸ್‌ಎಫ್‌ಐ ಸಂಘಟನೆಯೊಂದಿಗೆ ಗುರ್ತಿಸಿಕೊಂಡವರು. ಮುಂದೆ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾದ (ಡಿವೈಎಫ್‌ಐ) ಭಾಗವಾದವರು. ಅಲ್ಲಿಯೇ ಅವರಿಗೆ ಭಾಸ್ಕರನ್ ಮಾಸ್ತರ್ ಅವರ ಪರಿಚಯವಾಯಿತು. ಅವರು ಡಿವೈಎಫ್‌ಐನ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದರೆ, ಶೈಲಜಾ ಸದಸ್ಯೆಯಾಗಿದ್ದರು. ಇಬ್ಬರೂ 1981ರಲ್ಲಿ ವಿವಾಹವಾದರು. ಅದೇ ವರ್ಷ ಶೈಲಜಾ, ಕಣ್ಣೂರು ಜಿಲ್ಲೆಯ ಶಿವಪುರಂ ಶಾಲೆಯಲ್ಲಿ ವಿಜ್ಞಾನ ಶಿಕ್ಷಕಿಯಾಗಿ ನೇಮಕಗೊಂಡರು.

'ಶಾಲಾ ಮಕ್ಕಳ ಮೇಲೆ ಶೈಲಜಾ ಅವರದು ತಾಯಿ ಮಮತೆ. ಅಸಹಾಯಕರಿಗೆ ಸದಾ ನೆರವು ನೀಡುತ್ತಿದ್ದರು. ಅನ್ಯಾಯವನ್ನು ಎಂದಿಗೂ ಸಹಿಸುತ್ತಿರಲಿಲ್ಲ. ಮುಖ್ಯಮಂತ್ರಿಯಾಗಿದ್ದ ಕರುಣಾಕರನ್ ಅವರು ಕಣ್ಣೂರು ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾಗ ಅವರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಲೂ ಹಿಂಜರಿದಿರಲಿಲ್ಲ' ಎಂದು ಅವರ ಸಹೋದ್ಯೋಗಿಯಾಗಿದ್ದ ಉಷಾ ಟೀಚರ್ ಹೇಳುತ್ತಾರೆ.

1996ರಲ್ಲಿ ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾದ ಶೈಲಜಾ ಅವರು, ನಂತರದ ದಿನಗಳಲ್ಲಿ ಕಾಲಾವಕಾಶ ಸಿಕ್ಕಾಗಲೆಲ್ಲ ಪಾಠ ಮಾಡಲು ನಿಂತವರು. 2004ರಲ್ಲಿ ಶಿಕ್ಷಕಿಯ ವೃತ್ತಿಯಿಂದ ಸ್ವಯಂನಿವೃತ್ತಿ ಪಡೆದು ರಾಜಕೀಯದ ಮೂಲಕ ಸಮಾಜ ಸೇವೆಗೆ ತೊಡಗಿಸಿಕೊಂಡವರು. 2011ರಲ್ಲಿ ಸೋಲಿನ ಕಹಿಯನ್ನೂ ಅನುಭವಿಸಿದವರು. ಆದರೆ, 2016ರಲ್ಲಿ ಮತ್ತೆ ಗೆದ್ದು ಬಂದ ಅವರು, ಪಿಣರಾಯಿ ವಿಜಯನ್ ಅವರ ಸಂಪುಟದಲ್ಲಿ ಆರೋಗ್ಯ ಸಚಿವೆಯಾಗಿ ಮಾಡಿದ ಕೆಲಸ ಎಲ್ಲರನ್ನೂ ಸೆಳೆದಿದೆ.

ಕೇರಳದಲ್ಲಿ ಸೋಂಕು ಕಾಣಿಸಿಕೊಂಡ ಮಾಹಿತಿ ಸಿಗುತ್ತಿದ್ದಂತೆಯೇ ಮಧ್ಯರಾತ್ರಿಯೇ ಅಧಿಕಾರಿಗಳ ಸಭೆ ನಡೆಸಿದ ಟೀಚರ್, ಸೋಂಕಿತರ ಪತ್ತೆ, ಐಸೋಲೇಷನ್ ವ್ಯವಸ್ಥೆ ಹಾಗೂ ಸೋಂಕಿತರ ಸಂಪರ್ಕಕ್ಕೆ ಬಂದ ಜನರ ಪತ್ತೆಗೆ ಕಟ್ಟುನಿಟ್ಟಿನ ವ್ಯವಸ್ಥೆ ಮಾಡಿದರು. ಕರ್ನಾಟಕವೂ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಮಾಡಿದಂತೆ ಮೊದಲು ಸೋಂಕಿತರನ್ನು ಹೋಗಲುಬಿಟ್ಟು, ಬಳಿಕ ಪತ್ತೆಗೆ ಪರಿತಪಿಸಲಿಲ್ಲ. 'ಬ್ರೇಕ್ ದಿ ಚೈನ್' ಆಂದೋಲನವನ್ನು ಬಲು ಯಶಸ್ವಿಯಾಗಿ ನಡೆಸಿದರು.

ಸೋಂಕು ಹರಡುವಿಕೆಗೆ ಸಂಬಂಧಿಸಿದ ವಾಸ್ತವ ಚಿತ್ರಣವನ್ನು ಪ್ರತಿದಿನ ಮಾಧ್ಯಮ ಗೋಷ್ಠಿಯಲ್ಲಿ ನೀಡುವ ಮೂಲಕ ಪ್ರತಿಯೊಂದು ಮಾಹಿತಿಯೂ ರಾಜ್ಯದ ಜನತೆಗೆ ಸಿಗುವಂತೆ ನೋಡಿಕೊಂಡರು. ವಿಜ್ಞಾನ ಶಿಕ್ಷಕಿಯಾದ ಅನುಭವವು ಶೈಲಜಾ ಅವರಿಗೆ ಸೋಂಕಿನ ಹರಡುವಿಕೆ ಎಷ್ಟು ಕ್ಷಿಪ್ರವಾಗಿ ಆಗಲಿದೆ ಮತ್ತು ಅದನ್ನು ಹೇಗೆ ತಡೆಗಟ್ಟಬೇಕು ಎನ್ನುವುದನ್ನು ಅರಿತುಕೊಳ್ಳುವುದು ಕಷ್ಟವಾಗಲಿಲ್ಲ. ವುಹಾನ್‌ನಿಂದ ಬಂದವರ ಆರೋಗ್ಯ ರಕ್ಷಣೆ, ಕೊರೊನಾ ಸೋಂಕಿನಿಂದ ಸಾವುಗಳನ್ನು ತಡೆಗಟ್ಟುವಿಕೆ ಹಾಗೂ ಸಾರ್ವಜನಿಕರಲ್ಲಿ ಸೋಂಕು ಹರಡದಂತೆ ನಿಗಾ ವಹಿಸುವಿಕೆ – ಹೀಗೆ ಮೂರು ಹಂತಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಅವರು ಸನ್ನದ್ಧಗೊಳಿಸಿದರು. ಎಲ್ಲೆಲ್ಲಿ ಸಮಸ್ಯೆ ಇದೆಯೋ ಅಲ್ಲಿ ಖುದ್ದು ಹೋಗಿ ನಿಂತುಕೊಂಡು ಆರೋಗ್ಯ ಮೂಲಸೌಕರ್ಯ ಒದಗಿಸುವ ಕೆಲಸಮಾಡಿದರು. ಕ್ವಾರಂಟೈನ್‌ನಿಂದ ಮಾನಸಿಕವಾಗಿ ಬಳಲಿದವರಿಗೆ ಆಪ್ತಸಮಾಲೋಚನೆಯ ವ್ಯವಸ್ಥೆ ಮಾಡಿದರು. ಕೇಂದ್ರ ಆರೋಗ್ಯ ಇಲಾಖೆ ಎಚ್ಚೆತ್ತುಕೊಳ್ಳುವ ಹೊತ್ತಿಗೆ ಸೋಂಕಿನ ವಿರುದ್ಧದ ಹೋರಾಟದಲ್ಲಿ ಕೇರಳ ಬಹುದೂರ ಸಾಗಿತ್ತು.

ಕರ್ನಾಟಕವೂ ಸೇರಿದಂತೆ ಅಕ್ಕಪಕ್ಕದ ಹಲವು ರಾಜ್ಯಗಳು ಆಮ್ಲಜನಕದ ಕೊರತೆಯಿಂದ ಪರಿತಪಿಸುತ್ತಿದ್ದರೆ, ಶೈಲಜಾ ಟೀಚರ್ ಅವರ ಮುಂದಾಲೋಚನೆಯಿಂದ ಕಳೆದ ವರ್ಷವೇ ಕೇರಳದಲ್ಲಿ ಕಾರ್ಯಾರಂಭ ಮಾಡಿರುವ ಆಮ್ಲಜನಕ ಉತ್ಪಾದನಾ ಘಟಕಗಳು, ಅಲ್ಲಿನ ಬೇಡಿಕೆ ಪೂರೈಸಿ ಪಕ್ಕದ ರಾಜ್ಯಗಳಿಗೂ ಪೂರೈಕೆ ಮಾಡುತ್ತಿವೆ. ಹೌದು, ಇಂತಹ ಸಾಧಕಿಯನ್ನು 'ದಿ ಗಾರ್ಡಿಯನ್' ಪತ್ರಿಕೆ, 'ರಾಕ್‌ಸ್ಟಾರ್ ಹೆಲ್ತ್ ಮಿನಿಸ್ಟರ್' ಎಂದು ಕರೆದಿರುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65